**ಸಾಕ್ಷಿಗೆ ದಿನಾಂಕಃ05-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. TLP ವಕೀಲರಿಂದ ::**

1 ನೇ ಪ್ರತಿವಾದಿ ಮಲ್ಲಮ್ಮ ನನ್ನ ಅತ್ತೆ ಎಂದರೆ ಸರಿ. 1 ನೇ ಪ್ರತಿವಾದಿ ಮಲ್ಲಮ್ಮ ರವರ ಗಂಡ ಶೇಖರಪ್ಪ ವಾದಿಯ ಸ್ವಂತ ಅಣ್ಣ ಆಗಿರುತ್ತಾರೆ ಎಂದರೆ ಸರಿ. ವಾದಿ ಹಾಗೂ ಶೇಖರಪ್ಪ ಪಟೇಲ್ ಬೊಮ್ಮೆಗೌಡ ರವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮಗಳು ಹಾಗೂ ನನ್ನ ಹೆಂಡತಿ ಆಗಿರುತ್ತಾರೆ ಎಂದರೆ ಸರಿ. ನಿಪಿ2 ಪ್ರಕಾರ ದಾವಾ ಸರ್ವೇ ನಂಬರ್ 7 ನ ಒಟ್ಟು ವಿಸ್ತೀರ್ಣ 5 ಎಕರೆ 28 ಗುಂಟೆ, ಅದರ ಪೈಕಿ 34 ಗುಂಟೆ ಖರಾಬು ಜಾಗ ಇರುತ್ತದೆ ಎಂದರೆ ಸರಿ. ಸದರಿ ಜಾಗದ ಪೈಕಿ ನಿಪಿ22 ರಂತೆ ಪಟೇಲ್ ಬೊಮ್ಮೆಗೌಡ ರವರು 2 ಎಕರೆ ಜಾಗವನ್ನು ಸರ್ಕಾರಕ್ಕೆ ಭೂದಾನವನ್ನು ಮಾಡಿರುತ್ತಾರೆ ಎಂದರೆ ಸರಿ. ಅದರಂತೆ ಸದರಿ ಜಾಗದ ಪೈಕಿ 2 ಎಕರೆ ಪಹಣಿಯು ರಾಜ ಪ್ರಮುಖರ ಹೆಸರಿಗೆ ನಮುದಾಗಿರುತ್ತದೆ ಎಂದರೆ ಸರಿ. ನಿಪಿ14 ರಂತೆ ಪಟೇಲ್ ಬೊಮ್ಮೆಗೌಡ ಮೃತರಾದ ನಂತರದಲ್ಲಿ ವಾದಿ ಹಾಗೂ 1 ನೇ ಪ್ರತಿವಾದಿಯ ಗಂಡನ ನಡುವೆ ವಿಭಾಗವಾಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದ ಅಡಿಯಲ್ಲಿ 1 ನೇ ಪ್ರತಿವಾದಿಯ ಗಂಡನಿಗೆ ಹಾಗೂ ವಾದಿಗೆ ಸರ್ವೇ ನಂಬರ್ 7 ರಲ್ಲಿ ತಲಾ 3 ಎಕರೆ 34 ಗುಂಟೆಯಂತೆ ಒಟ್ಟು 7 ಎಕರೆ 22 ಗುಂಟೆ ಜಮೀನು ಹೋಗಿರುತ್ತದೆ ಎಂದರೆ ಸರಿ. ದಾವಾ ಸರ್ವೇ ನಂಬರ್ ನಲ್ಲಿ ಕೇವಲ 5 ಎಕರೆ 28 ಗುಂಟೆ ಜಾಗ ಮಾತ್ರ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ನಿಪಿ14 ರ ಪ್ರಕಾರ ಕುಟುಂಬದಲ್ಲಿ ಸರ್ವೇ ನಂಬರ್ 7 ರಲ್ಲಿ 7 ಎಕರೆ 22 ಗುಂಟೆ ಇರುತ್ತದೆ ಎಂದು ನುಡಿದಿರುತ್ತಾರೆ.

ನಿಪಿ14 ರ 1 ನೇ ಪ್ರತಿವಾದಿಯ ಗಂಡನಿಗೆ ಬಂದ ಹಿಸ್ಸೆಯ ಚೆಕ್ಕುಬಂದಿ ಪೂರ್ವಕ್ಕೆ 1 ನೇ ಪ್ರತಿವಾದಿಯ ಗಂಡನ ಉಳಿಕೆ ಜಮೀನು, ಪಶ್ಚಿಮಕ್ಕೆ ಭದ್ರಜ್ಜಿ ಗಂಗಣ್ಣನ ಜಮೀನು, ಉತ್ತರಕ್ಕೆ ವಾದಿಯ ಹಿಸ್ಸೆಯ ಜಮೀನು ಮತ್ತು ದಕ್ಷಿಣಕ್ಕೆ ಮಾಹದೇವಪ್ಪ ರವರ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ದಾಖಲ್ಲಿನ ಚೆಕ್ಕುಬಂದಿಯ ಉತ್ತರದಲ್ಲಿ ಇರುವ ವಾದಿಯ ಜಮೀನು ಅಂದರೆ ಸದರಿ ಪತ್ರದಡಿಯಲ್ಲಿಯೇ ಅವರ ಹಿಸ್ಸೆಗೆ ಬಂದ ಜಮೀನು ಆಗಿರುತ್ತದೆ ಎಂದರೆ ಸರಿ.

1 ನೇ ಪ್ರತಿವಾದಿ ಅಸಲು ದಾವಾ 372/2022 ರಂತೆ ಮತ್ತೊಂದು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ. ಸದರಿ ದಾವೆಯನ್ನು ಸರ್ವೇ ನಂಬರ್ 7 ರಲ್ಲಿನ 3 ಎಕರೆ 34 ಗುಂಟೆಗೆ ಸಂಬಂಧಪಟ್ಟಂತೆ ಹೂಡಲಾಗಿರುತ್ತದೆ. ಸದರಿ ದಾವೆಯ ಚೆಕ್ಕುಬಂದಿ ಪೂರ್ವಕ್ಕೆ ಶೇಖರಪ್ಪ ರವರ ಜಮೀನು, ಪಶ್ಚಿಮಕ್ಕೆ ಭದ್ರೋಜ್ಜಿ ಗಂಗಣ್ಣ ರವರ ಜಮೀನು, ಉತ್ತರಕ್ಕೆ ವಾದಿಯ ಜಮೀನು ಮತ್ತು ದಕ್ಷಿಣಕ್ಕೆ ಮಹಾದೇವಪ್ಪ ರವರ ಜಮೀನು ಎಂದು ನಮೂದು ಮಾಡಲಾಗಿರುತ್ತದೆ. ಸಾಕ್ಷಿಗೆ ಸದರಿ ದಾವೆಯ ವಾದ ಪತ್ರವನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಒಪ್ಪಿದ ಕಾರಣ ಅದನ್ನು ನಿಪಿ27 ಎಂದು ಗುರುತಿಸಲಾಯಿತು. ನಿಪಿ27 ರ ಜಮೀನಿನ ವಿಸ್ತೀರ್ಣ 2 ಎಕರೆ 34 ಗುಂಟೆ ಇದ್ದು, ಸದರಿ ಆಸ್ತಿಯ ಪೂರ್ವಕ್ಕೆ ಶೇಖರಪ್ಪ ರವರ ಜಮೀನು, ಪಶ್ಚಿಮಕ್ಕೆ ಭದ್ರೋಜ್ಜಿ ಗಂಗಣ್ಣ ರವರ ಜಮೀನು, ಉತ್ತರಕ್ಕೆ ರಾಜ ಪ್ರಮುಖರಿಗೆ ನೀಡಿರುವ ಜಮೀನು ಮತ್ತು ದಕ್ಷಿಣಕ್ಕೆ ಮಹಾದೇವಪ್ಪನ ಮಗನ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ಈಗ ಹೇಳಿರುವ ವಿಸ್ತೀರ್ಣ ಹಾಗೂ ಚೆಕ್ಕುಬಂದಿಗೂ ನಿಪಿ27 ರಲ್ಲಿ ಇರುವ ವಿಸ್ತೀರ್ಣ ಹಾಗೂ ಚೆಕ್ಕುಬಂದಿಗೂ ತಾಳೆ ಇರುವುದಿಲ್ಲ ಎಂದರೆ ಸರಿ.

ಪಟೇಲ್ ಬೊಮ್ಮೆಗೌಡರು ರಾಜ ಪ್ರಮುಖರಿಗೆ ನೀಡಿದ 2 ಎಕರೆ ಭೂದಾನದ ಜಮೀನಿನ ಚೆಕ್ಕುಬಂದಿ ನನಗೆ ತಿಳಿದಿರುತ್ತದೆ. ಸದರಿ ಜಮೀನಿನ ಪೂರ್ವಕ್ಕೆ ಸರ್ಕಾರಿ ಗೋಮಾಳ, ಪಶ್ಚಿಮಕ್ಕೆ ಅವರ ಉಳಿಕೆ ಜಮೀನು, ಉತ್ತರಕ್ಕೆ ಪಟೇಲ್ ಬೊಮ್ಮೆಗೌಡ ರವರ ಜಮೀನು ಹಾಗೂ ಸರ್ಕಾರಿ ಗೋಮಾಳ ಮತ್ತು ದಕ್ಷಿಣಕ್ಕೆ ಅವರ ಉಳಿಕೆ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ಭೂದಾನದ ಜಮೀನಿನ ದಕ್ಷಿಣಕ್ಕೆ ಪಟೇಲ್ ಬೊಮ್ಮೆಗೌಡರ ಉಳಿಕೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಉತ್ತರ ಹಾಗೂ ದಕ್ಷಿಣ ಎರಡು ದಿಕ್ಕಿನಲ್ಲಿ ಅವರ ಉಳಿಕೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 7 ರಲ್ಲಿ 5 ಎಕರೆ 28 ಗುಂಟೆ ಜಮೀನಿನ ಪೈಕಿ ರಾಜ ಪ್ರಮುಖರಿಗೆ 2 ಎಕರೆ ಜಮೀನು ಅನ್ನು ಸದರಿ ಜಾಗದ ಉತ್ತರಕ್ಕೆ ದಾನವಾಗಿ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸರ್ವೇ ನಂಬರ್ 7 ರಲ್ಲಿ ಮಧ್ಯ ಭಾಗದಲ್ಲಿ ರಾಜ ಪ್ರಮುಖರಿಗೆ ದಾನಕೊಡಲಾಗಿರುತ್ತದೆ ಎಂದು ತೋರಿಸಲು

ನನ್ನ ಬಳಿ ದಾಖಲೆ ಇದ್ದು ಅದನ್ನು ಮುಂದೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾನು ಹೇಳುತ್ತಿರುವ ದಾಖಲೆಯು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ಈಗ ಹೇಳುತ್ತಿರುವ ವಿಚಾರವನ್ನು ನನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಪಟೇಲ್ ಬೊಮ್ಮೆಗೌಡರು ಸರ್ಕಾರಕ್ಕೆ ಭೂ ದಾನ ನೀಡಿದ ನಂತರದಲ್ಲಿ ಅವರ ಬಳಿ 3 ಎಕರೆ 28 ಗುಂಟೆ ಆಸ್ತಿ ಮಾತ್ರ ಉಳಿದಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಕೇವಲ 3 ಎಕರೆ 28 ಗುಂಟೆ ಆಸ್ತಿ ಉಳಿದಿದ್ದರೂ ತಪ್ಪಾಗಿ ನಿಪಿ14 ವಿಭಾಗ ಪತ್ರದಲ್ಲಿ ಅವರ ಬಳಿ 7 ಎಕರೆ 28 ಗುಂಟೆ ಆಸ್ತಿ ಇರುವುದಾಗಿ ವಿಭಾಗ ಮಾಡಿಕೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ತಪ್ಪಿಗೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯಲ್ಲಿ ಹಲವಾರು ವ್ಯಾಜ್ಯಗಳು ಆಗಿರುತ್ತವೆ ಎಂದರೆ ಸರಿ. ಸದರಿ ಕಂದಾಯ ಇಲಾಖೆಯ ಮುಂದೆ ಮೇಲ್ಮನವಿಯನ್ನು ವಾದಿ ಸಲ್ಲಿಸಿರುತ್ತಾರೆ ಅದರಲ್ಲಿ ನಾನು ತಕರಾರು ಹೂಡಿರುತ್ತೇನೆ. ಸದರಿ ವ್ಯಾಜ್ಯಕ್ಕೆ ಸಂಬಂಧಪಟ್ಟಂತೆ ಕಂದಾಯ ಅದಾಲತ್ ನಲ್ಲಿ ನಿಪಿ20 ರ ಪ್ರಕಾರ ನನಗೂ ಸಹ ನೋಟೀಸ್ ನೀಡಲಾಗಿತ್ತು ಎಂದರೆ ಸರಿ. ನಿಪಿ20 ರ ಅಡಿಯಲ್ಲಿ ರಾಜ ಪ್ರಮುಖರಿಗೆ 2 ಎಕರೆ, 1 ನೇ ಪ್ರತಿವಾದಿಗೆ 2 ಎಕರೆ 17 ಗುಂಟೆ ಹಾಗೂ ವಾದಿಗೆ 17 ಗುಂಟೆ ಇರುವುದಾಗಿ ನಮೂದಾಗಿರುತ್ತದೆ ಎಂದರೆ ಸರಿ. ನಂತರದಲ್ಲಿ ಕಂದಾಯ ಅದಾಲತ್ ನ ತೀರ್ಮಾನದಂತೆ ಸರ್ವೇ ನಂಬರ್ ನ ಪೈಕಿ ವಾದಿಗೆ ಹಾಗೂ 1 ನೇ ಪ್ರತಿವಾದಿಗೆ ತಲಾ 1 ಎಕರೆ 17 ಗುಂಟೆ ಹೋಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ನಾವು ಅದಕ್ಕೆ ಸಂಬಂಧಪಟ್ಟಂತೆ ತಕರಾರು ಹೂಡಿರುತ್ತೇವೆ ಎಂದು ನುಡಿದಿರುತ್ತಾರೆ. ಆ ರೀತಿ ತಕರಾರನ್ನು ಡಿಸಿ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆ. ಸದರಿ ಮೇಲ್ಮನವಿಗೆ ಸಂಬಂಧಪಟ್ಟಂತೆ ದಾಖಲಾತಿಗಳು ನಾನು ನನ್ನ ವಕೀಲರಿಗೆ ನೀಡಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

1 ನೇ ಪ್ರತಿವಾದಿಗೆ ಬಂದ 1 ಎಕರೆ 17 ಗುಂಟೆ ಜಮೀನಿನ ಪೈಕಿ ಪೂರ್ವಕ್ಕೆ ಶೇಖರಪ್ಪ ರವರ ಜಮೀನು, ಪಶ್ಚಿಮಕ್ಕೆ ಭದ್ರೋಜ್ಜಿ ಗಂಗಣ್ಣ ರವರ ಜಮೀನು, ಉತ್ತರಕ್ಕೆ ಭೂದಾನ ಹಾಗೂ ಬಸವರಾಜಪ್ಪ ಜಮೀನು ಮತ್ತು ದಕ್ಷಿಣಕ್ಕೆ ಮಹಾದೇವಪ್ಪ ರವರ ಜಮೀನು ಇರುತ್ತದೆ.

(ಊಟದ ಸಮಯವಾದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಪ್ರ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ತರೀಕೆರೆ

ಸಾಕ್ಷಿಯ ಸಹಿ::